ನಡೆಯಿತು. ದೂರದೂರುಗಳಿಂದ ಭಕ್ತಾದಿಗಳು ಬಂದರು. ಮುಜಾವರ್ ಸಹ ಬಂದರು. ಉರುಸ್ ಸಂದರ್ಭದಲ್ಲಿ ಮುಜಾವರ್‌ಗಳಿಗೆ ಕೈ ತುಂಬಾ ಭಿಕ್ಷೆ ಸಿಕ್ಕಿತು. ಹೊಟ್ಟೆ ತುಂಬ ಊಟ ಸಹ.

ಉರುಸ್ ನಡೆದ ವಾರದ ಬಳಿಕವೂ ಭಕ್ತಾದಿಗಳು ಬರುವುದು ಕಡಿಮೆಯಾಗಲಿಲ್ಲ. ಆಮೇಲೆ ಅಲ್ಲಿನ ದರ್ಗಾ ಎಂದಿನಂತೆ ಯಥಾಸ್ಥಿತಿಗೆ ಮರಳಲು ಎರಡು ವಾರಗಳು ಹಿಡಿದವು.

ಶಿವನ ಸಮುದ್ರದಿಂದ ಬಂದಿದ್ದ ಮುಜಾವರ್‌ಗಳೆಲ್ಲರೂ ಗಂಟುಮೂಟೆ ಕಟ್ಟಿ ಹೊರಟು ನಿಂತರು. ಸಲೀಂ ಅವರೊಂದಿಗೆ ಹೋಗಲಿಲ್ಲ. ತಾನು ಇಲ್ಲೇ ಇನ್ನಷ್ಟು ದಿನ ಇರುತ್ತೇನೆಂದು ಹೇಳಿದ.

ಆಮೇಲೆ ದೂಳೆಬ್ಬಿಸಿ ಹೋಗುತ್ತಿರುವ ಟೆಂಪೋವನ್ನೇ ನೋಡುತ್ತಾ ನಿಂತುಕೊಂಡ.

ಕೋವಲಂನಲ್ಲಿ ಸಲೀಂಗೆ ಉಳಿದುಕೊಳ್ಳಲು ಯಾವ ತೊಂದರೆಯೂ ಎದುರಾಗಲಿಲ್ಲ. ಇಲ್ಲಿ ನಿತ್ಯ ಎಲ್ಲೆಲ್ಲಿಂದಲೋ ಭಕ್ತರು ಬರುತ್ತಿದ್ದರು. ಬಂದವರು ಬಡವರಿಗೆ ಅನ್ನ ಹಾಕುವುದಲ್ಲದೇ, ಕೈ ಚಾಚಿದರೆ ಹತ್ತಿಪ್ಪತ್ತು ರೂಪಾಯಿ ಕೊಡುತ್ತಿದ್ದರು. ಸಲೀಂ ಇಲ್ಲಿ ಬಂದ ಬಳಿಕ ಹಸಿದುಕೊಂಡು ಒಂದು ದಿನವೂ ಮಲಗಲಿಲ್ಲ. ಊಟ ಹಾಕುತ್ತಿದ್ದರೆ ಅಲ್ಲಿ ತಟ್ಟೆ ತೆಗೆದುಕೊಂಡು ಹೋಗಿ ಕುಳಿತುಕೊಳ್ಳುತ್ತಿದ್ದ. ದುಡ್ಡು ಇಸಿದುಕೊಳ್ಳುವ ವಿಚಾರದಲ್ಲಿ ಮೊದಮೊದಲು ನಾಚಿಕೊಳ್ಳುತ್ತಿದ್ದ. ಆಮೇಲೆ ನಾಚುವುದನ್ನು ಬಿಟ್ಟು ಎಲ್ಲರ ಮುಂದೆ ಕೈ ಚಾಚಲು ಪ್ರಾರಂಭಿಸಿದ.

ಎರಡು ವರ್ಷಗಳು ಜಾರಿ ಹೋದವು.

ಊರಿಗೆ ಹೋದರೆ ರಸೂಲ್‌ನ ವಿಚಾರ ತಿಳಿದು ಅವನೇನಾದರೂ ಬೇರೆ ಮದುವೆ ಮಾಡಿಕೊಂಡಿದ್ದರೆ, ತಾನು ದುಡುಕಿ ಅವನ ಕೊಲೆ ಮಾಡಿಬಿಟ್ಟರೆ, ಮನೆ ಮಂದಿಯ ನೆಮ್ಮದಿ ಹಾಳು ಮಾಡಿದಂತಾಗುತ್ತದೆ.

ಸಲೀಂ ಈಗ ಉದ್ದನೆಯ ನಿಲುವಂಗಿ ಉಟ್ಟು, ತಲೆಗೆ ಹಸಿರು ಪೇಟ, ಪಟ್ಟಾಪಟ್ಟನೆಯ ಲುಂಗಿ ಇಕ್ಕಿಕೊಳ್ಳುತಿದ್ದ. ದೂರದ ಅಜ್ಮೀರ್ ದರ್ಗಾದಿಂದ ಬಂದಿದ್ದ ಹಿರಿಯ ಮುಜಾವರ್‌ವೊಬ್ಬರು ದಪ್ಪ ಕೆಂಪು ಬಣ್ಣದ ಮಣಿಯ ಹಾರ ಕೊಟ್ಟರು. ಅದನ್ನು ಅವನು ಕತ್ತಿನಲ್ಲಿ ಹಾಕಿಕೊಳ್ಳುತ್ತಿದ್ದ. ಈಗವನ ವ್ಯಕ್ತಿತ್ವದಲ್ಲಿ ಗಂಭೀರತೆ ಬಂದಿತ್ತು. ಒಟ್ಟಿನಲ್ಲಿ ಹೇಳುವುದಾದರೆ ಅವನು ಮುಜಾವರ್‌ಗಳಂತೆ ಕಾಣಿಸಿಕೊಳ್ಳುತ್ತಿದ್ದ. ಅವನನ್ನು ಸಲೀಂ ಎಂದು ಪತ್ತೆ ಹಚ್ಚಲು ಸಾಧ್ಯವಿರಲಿಲ್ಲ.

ಕೋವಲಂ ದರ್ಗಾಕ್ಕೆ ಹುಚ್ಚು ಹಿಡಿದವರನ್ನು ಕರೆದುಕೊಂಡು ಬಂದು ಹಿರಿಯ ಮುಜಾವರ್ ಕೈಯಿಂದ ತಾಯಿತ ಕಟ್ಟಿಸಿ, ಹುಚ್ಚು ಕಡಿಮೆಯಾದರೆ ಬಂದು ಹರಕೆ ತೀರಿಸುತ್ತೇನೆ ಎಂದು ಹೋಗುತ್ತಿದ್ದರು.

ಹಿರಿಯ ಮುಜಾವರ್ ಹುಚ್ಚು ಹಿಡಿದವರನ್ನು ಮಜಾರ್ (ಸಮಾಧಿ) ಮುಂದೆ ಕೂರಿಸಿಕೊಂಡು ನವಿಲುಗರಿಗಳ ಚಾಮರದಿಂದ ಲೋಬಾನ್ (ಸಾಂಬ್ರಾಣಿ) ಹೊಗೆಯಿಂದ ಹುಚ್ಚು ಹಿಡಿದವರನ್ನು ಝಾಡಿಸುತ್ತಿದ್ದರು. ಸಮಾಧಿ ಮುಂದೆ ಕುಳಿತುಕೊಳ್ಳುವ ಅಧಿಕಾರ ಹಿರಿಯ ಮುಜಾವರ್‌ನವರಿಗೆ ಸೇರಿದ್ದು, ಅದು ತಲಾಂತರದಿಂದ ಅವರ ಕುಟುಂಬಕ್ಕೆ ಮಾತ್ರ ಸೇರಿದ್ದಾಗಿತ್ತು.

ಹುಚ್ಚು ಹಿಡಿದವರ ಪೈಕಿ ಅನೇಕ ಮಂದಿ ಸಮಾಧಿ ಮುಂದೆ ಕೂರಲು ಹಿಂದೇಟು ಹಾಕುತ್ತಿದ್ದರು. ಅವರನ್ನು ಮೂರು ಮೂರು ಮಂದಿ ಹಿಡಿದುಕೊಂಡು ಕೂರಿಸುತ್ತಿದ್ದರು. ಎಷ್ಟೋ ಮಂದಿಯನ್ನು ಕೈ ಕಟ್ಟಿ ಕರೆದುಕೊಂಡು ಬರುತ್ತಿದ್ದರು. ಅಂಥವರನ್ನು ಆರಾರು ಮಂದಿ ಹಿಡಿದು ಬಲವಂತವಾಗಿ ಕೂರಿಸುತ್ತಿದ್ದರು. ಇಷ್ಟಾಗಿಯೂ ಕೂರದಿದ್ದರೆ ಮುಜಾವರ್ ಎದ್ದು ತಮ್ಮ ಬಳಿ ಇರುವ ಛಡಿಯಿಂದ ಅವನ ಬೆನ್ನಿನ ಮೇಲೆ ನಾಲ್ಕಾರು ಏಟು ಹಾಕುತ್ತಿದ್ದರು.

ಇದೆಲ್ಲವನ್ನೂ ಸಲೀಂ ನೋಡುವುದಲ್ಲದೆ ಎಷ್ಟೋ ಬಾರಿ ಹುಚ್ಚರನ್ನು ಮಜಾರ್ ಮುಂದೆ ಬಲವಂತವಾಗಿ ಕೂರಿಸುವವರ ಪೈಕಿ ತಾನೂ ಸೇರಿಕೊಳ್ಳುತ್ತಿದ್ದ.

ಹಿರಿಯ ಮುಜಾವರ್ ಹುಚ್ಚು ಹಿಡಿದವನ ಮುಖ ಮುಸುಡಿ ನೋಡದೆ ಛಡಿಯಿಂದ ಹೊಡೆಯುತ್ತಿರುವುದನ್ನು ನೋಡಿ ಅವನೇ ಹೆದರಿಕೊಳ್ಳುತ್ತಿದ್ದ.

ಕೆಲವರು ಹುಚ್ಚು ಹಿಡಿದವರನ್ನು ಇಲ್ಲೇ ಬಿಟ್ಟು ಹೊರಟು ಹೋಗುತ್ತಿದ್ದರು.

ಸಲೀಂ ಇಲ್ಲಿನ ವಾತಾವರಣಕ್ಕೆ ತುಂಬಾ ಹೊಂದಿಕೊಂಡಿದ್ದ. ಒಮ್ಮೊಮ್ಮೆ ಅವನಿಗೆ ತಾನು ಇಲ್ಲೇ ಜನ್ಮ ತಾಳಿದವನೆಂದೆನಿಸುತಿತ್ತು.

ಬೆಳಿಗ್ಗೆ ಸಂಜೆ ತಪ್ಪದೇ ಸಮುದ್ರದ ದಡಕ್ಕೆ ಭೇಟಿ